**ದಿನಾಂಕಃ 05/12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಯು.ಎಸ್ ವಕೀಲರಿಂದಃ**

1. ನನ್ನ ತಂದೆಗೆ ಇಬ್ಬರು ಮಕ್ಕಳು. ನನ್ನ ತಂದೆಗೆ 4 ಜನ ಅಣ್ಣತಮ್ಮಂದಿರು. ಅಂದರೆ ಸಣ್ಣೇಗೌಡ, ಗಿಡ್ಡೇಗೌಡ, ಜವರೇಗೌಡ ಮತ್ತು ಪೂಜಾರಿ. ನನ್ನ ತಾತನ ಹೆಸರು ಸತ್ತಿಗೌಡ. ದಾವಾಸ್ವತ್ತು ಸತ್ತಿಗೌಡರವರಿಗೆ ಕೆಂಗೇಗೌಡರವರಿಂದ ಸರ್ವೆ ನಂ.120 ರಲ್ಲಿ ಸ್ವತ್ತು ಬಂದಿರುತ್ತದೆ. ಸರ್ವೆ ನಂ.120 ರಲ್ಲಿ ಸತ್ತಿಗೌಡರ 4 ಮಕ್ಕಳಿಗೆ ಭಾಗ ಆಗಿಲ್ಲ. ನನ್ನ ತಾತನಿಂದ ನನ್ನ ತಂದೆಯ ಹೆಸರಿಗೆ ದಾವಾಸ್ವತ್ತು ಬಂದಿರುತ್ತದೆ. ಯಾವ ದಾಖಲಾತಿಯ ಮುಖಾಂತರ ನನ್ನ ತಂದೆಯ ಹೆಸರಿಗೆ ಬಂದಿದೆ ಎಂದು ಗೊತ್ತಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಖಾತೆ ಇದೆ. ಅದರ ದಾಖಲಾತಿ ನೀಡಿದ್ದೇನೆ. ನನ್ನ ತಾತನ ಸ್ವತ್ತನ್ನು ನನ್ನ ತಂದೆಯ ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ. ದಾವಾಸ್ವತ್ತಿನ ಚಕ್ಕುಬಂದಿ ಗೊತ್ತು. ಪೂರ್ವಕ್ಕೆ ಭೂತಹಳ್ಳಿ ದಾಸೇಗೌಡರ ಜಮೀನು, ಪಶ್ಚಿಮಕ್ಕೆ ಮೊಗಣ್ಣೇಗೌಡರವರ ಜಮೀನು, ದಕ್ಷಿಣಕ್ಕೆ ಅಪ್ಪಶೆಟ್ಟಿಯವರ ಜಮೀನು ಎಂದು ನುಡಿಯುತ್ತಾ ಸಣ್ಣಪ್ಪನವರ ಜಮೀನು ಎಂದು ನುಡಿಯುತ್ತಾರೆ. ಉತ್ತರಕ್ಕೆ ಅಪ್ಪಶೆಟ್ಟಿ ಯವರ ಜಮೀನು.

2. ಬೀರೇಗೌಡರ ಮಗ ಮಹದೇವ ಮತ್ತು ಅಣ್ಣೇಗೌಡರ ಮಗ ಚಂದ್ರು ರವರು ಸಂಬಂಧಿಕರಾಗಬೇಕು. ನಿಮಗೆ ದಾವಾಸ್ವತ್ತು ವಿಭಾಗದಲ್ಲಿ ಬಂದಿದ್ದಾ ಅಥವಾ ನಿಮ್ಮ ತಂದೆ ತೆಗೆದುಕೊಂಡಿದ್ದಾ ಎಂದರೆ ಸಾಕ್ಷಿಯು ನನ್ನ ತಾತ ತೆಗೆದುಕೊಂಡಿದ್ದು ಎಂದು ನುಡಿಯುತ್ತಾರೆ. ಸತ್ತಿಗೌಡರ ಮಗ ಸಣ್ಣೇಗೌಡ ಎಂದರೆ ನನ್ನ ದೊಡ್ಡಪ್ಪನಾಗಬೇಕು. ಸರ್ವೆ ನಂ.120 ರಲ್ಲಿ ಒಟ್ಟು 1 ಎಕರೆ 33 ಗುಂಟೆ ಜಮೀನು ಇದೆ. ಸರ್ವೆ ನಂ.120 ರಲ್ಲಿ 5 ಎಕರೆ 18 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ನಾವು 1 ಎಕರೆ 33 ಗುಂಟೆಯನ್ನು 1958 ರಲ್ಲಿ ಖರೀದಿಸಿದ್ದೇವೆ ಎಂದು ನುಡಿಯುತ್ತಾರೆ. 5 ಎಕರೆ 18 ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳೇ ಸ್ವಾಧೀನಹೊಂದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನಲ್ಲಿ ಸ್ವಾಧೀನ ಇದ್ದೇನೆಂದು ತೋರಿಸಲು ಸ್ವಾಧೀನಪತ್ರ

ಹಾಜರುಪಡಿಸಿಲ್ಲ. ನಾನು ಬ್ಯಾಂಕಿನಲ್ಲಿ ದಾವಾಸ್ವತ್ತಿನ ಮೇಲೆ ಸಾಲ ಪಡೆದಿದ್ದೇನೋ ಇಲ್ಲವೋ ಗೊತ್ತಿಲ್ಲ. ಪ್ರತಿವಾದಿಗಳು 5 ಎಕರೆ 18 ಗುಂಟೆ ಜಮೀನಿನ ಮೇಲೆ ಸಾಲ ಪಡೆದಿದ್ದಾರೆ ಮತ್ತು ಸದರಿ ಜಮೀನಿನಲ್ಲಿ ತಂಬಾಕು ಬೆಳೆದ ದಾಖಲಾತಿಗಳು ಇವೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಮೊಗಣ್ಣೇಗೌಡರ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇದೆ.

3. ಬೀರೇಗೌಡ, ಗಿಡ್ಡೇಗೌಡ, ಅಣ್ಣಯ್ಯ ಎಂಬುವವರು ಅಣ್ಣತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ಮಹದೇವ ಮತ್ತು ಚಂದ್ರ ರವರು ಬೀರೇಗೌಡ ಹಾಗೂ ಅಣ್ಣಯ್ಯ ರವರ ಮಕ್ಕಳಾಗಿದ್ದು, ಅವರು 5 ಎಕರೆ 18 ಗುಂಟೆ ಜಮೀನನ್ನು ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವರು ಖರೀದಿಸಿರುವ ಜಮೀನಿನ ಚಕ್ಕುಬಂದಿಗೂ ನಾನು ಹೇಳಿದ ಚಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ದಿಃ16/05/1983 ರಂದು ಪ್ರತಿವಾದಿಗಳ ಹೆಸರಿಗೆ ನೊಂದಣಿಯಾಗಿದೆ ಎಂದರೆ ಸರಿಯಲ್ಲ. ಸದರಿ ನೊಂದಣಿಯ ದಾಖಲೆಯಲ್ಲಿ ಪೂರ್ವಕ್ಕೆ ಕಳುವಯ್ಯನ ಕಾಳಯ್ಯನ ಜಮೀನು, ಪಶ್ಚಿಮಕ್ಕೆ ಸಣ್ಣೇಗೌಡರ ಜಮೀನು, ಉತ್ತರಕ್ಕೆ ಬೀರೇಗೌಡರ ಜಮೀನು, ದಕ್ಷಿಣಕ್ಕೆ ಸಣ್ಣಪ್ಪ ನವರ ಜಮೀನು ಎಂದು ಬರೆದಿದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಖಾತೆ 1983 ರಿಂದಲೂ 1 ನೇ ಪ್ರತಿವಾದಿಯ ಹೆಸರಿನಲ್ಲಿಯೇ ಇದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**